ವಿಷಯ:- ರಾಜ್ಯದಲ್ಲಿರುವ ನ್ಯಾಯಲಯಗಳ ಮೊಕದ್ದಮೆಗಳ ಸಂಖ್ಯೆ.

134(468)

ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಕಾನೂನು, ಸಂಸದೀಯ ವ್ಯವಹಾರಗಳೂ, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯದ ಉಚ್ಛ ನ್ಯಾಯಾಲಯವು ಸೇರಿದಂತೆ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ಒಟ್ಟು ಮೊಕದ್ದಮೆಗಳೆಷ್ಟು;

ಆ) ತ್ವರಿತ ವಿಲೇವಾರಿಗಾಗಿ ತೆಗೆದುಕೊಂಡ ಕ್ರಮಗಳೇನು?

ಶ್ರೀ ಯಂ.ಸಿ. ನಾಣಯ್ಯ (ಕಾನೂನು, ಸಂಸದೀಯ ವ್ಯವಹಾರಗಳು, ಶಾಸನ ರಚನೆ, ವಾರ್ತಾ ಮತ್ತು ಪ್ರಚಾರ ಸಚಿವರು):-

ಅ) ದಿನಾಂಕ 1-1-1997 ರಲ್ಲಿ ಇದ್ದಂತೆ ಒಟ್ಟು 13,52,443 ಮೊಕದ್ದಮೆಗಳು ಬಾಕಿ ಇರುತ್ತವೆ. (ಕರ್ನಾಟಕ ಉಚ್ಛ ನ್ಯಾಯಾಲಯ 1,50,965 ಅಧೀನ ನ್ಯಾಯಾಲಯಗಳು 12,01,478).

ಆ) 1. ಹೆಚ್ಚುವರಿ ನ್ಯಾಯಾಲಯಗಳನ್ನು ಸ್ಥಾಪಿಸುವುದು.

2. ನ್ಯಾಯಾಲಯ ಕಟ್ಟಡಗಳನ್ನು ಮತ್ತು ನ್ಯಾಯಾಧೀಶರ ವಸತಿ ಗೃಹಗಳನ್ನು ಕಟ್ಟಿಸುವುದು ಮತ್ತು ನ್ಯಾಯಾಧೀಶರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.

3. ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳನ್ನು ಇತ್ಯರ್ಥ ಮಾಡುವುದು, ಆಡಳಿತಾತ್ಮಕವಾಗಿ ಉಚ್ಛ ನ್ಯಾಯಾಲಯ ಮತ್ತು ಅಧೀನ ನ್ಯಾಯಾಲಯಗಳ ವ್ಯಾಪ್ತಿಗೆ ಬರುವುದರಿಂದ, ನ್ಯಾಯಾಲಯಗಳೇ ಕ್ರಮ ಕೈಗೊಳ್ಳಬೇಕಾಗುತ್ತದೆ.

4. ಫೈಲೆಟ್ ಯೋಜನೆ (ಫೈಲೆಟ್ ಪ್ರೊಜೆಕ್ಟ್) ಯನ್ನು ನಾಲ್ಕು ಜಲ್ಲೆಗಳಲ್ಲಿ, ಕೊಡಗು, ಚಿಕ್ಕಮಗಳೂರು, ಮಂಡ್ಯ ಬಿಜಾಪುರದಲ್ಲಿ ಅಳವಡಿಸಿ ಮತ್ತು ಬೇರೆ ಜಿಲ್ಲೆಗಳಲ್ಲಿ ಹಂತ ಹಂತವಾಗಿ ಅಳವಡಿಸಲಾಗುವುದು.

ವಿಷಯ:- ರಾಜ್ಯದ ಹೆದ್ದಾರಿಗಳ ಅಭಿವೃದ್ಧಿ.

135(471)

ಶ್ರೀ ಎಸ್.ಡಿ. ಮುದ್ದಹನುಮೇಗೌಡ (ಕುಣಿಗಲ್):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗಾಗಿ ಪ್ರಸಕ್ತ ಸಾಲಿನಲ್ಲಿ ಖರ್ಚು ಮಾಡಿರುವ ಮೊತ್ತ;

ಆ) ಇದರಲ್ಲಿ ಕುಣಿಗಲ್ ವಿಧಾನಸಭಾ ಕ್ಷೇತ್ರಕ್ಕೆ ಮಾಡಿರುವ ವೆಚ್ಚ;

ಇ) ಕಾಮಗಾರಿಗಳ ಒಟ್ಟು ಅಭಿವೃದ್ಧಿಯ ಪ್ರಗತಿ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ಈ ಸಾಲಿನಲ್ಲಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗಾಗಿ (ಯೋಜನೆ) ಜನವರಿ 1997ರವರೆಗೆ 1218.65 ಲಕ್ಷ ರೂ.ಗಳನ್ನು ವೆಚ್ಚ ಮಾಡಲಾಗಿದೆ.

ಆ) ಕುಣಿಗಳ್ ವಿಧಾನ ಸಭಾ ಕ್ಷೇತ್ರಕ್ಕೆ 14.68 ಲಕ್ಷ ರೂ.ಗಳ ವೆಚ್ಚವಾಗಿರುತ್ತದೆ.

ಇ) ಪ್ರಸ್ತುತ ವರ್ಷದಲ್ಲಿ ಕುಣಿಗಲ್ ವಿಧಾನ ಸಭಾ ಕ್ಷೇತ್ರದಡಿ 10.60 ಕಿಮೀ. ಉದ್ದದ ರಾಜ್ಯ ಹೆದ್ದಾರಿಯನ್ನು ಅಭಿವೃದ್ಧಿಗೊಳಿಸಲಾಗಿದೆ.

ವಿಷಯ:- ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳ ಅಭಿವೃದ್ಧಿ.

136(398)

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ):- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳು ನೆರೆ ಹಾವಳಿಯಿಂದ ಹಾಳಾಗಿದ್ದು ಸುಧಾರಣೆಯಿಲ್ಲದೇ ವಾಹನ ಸಂಚಾರಕ್ಕೆ ತೊಂದರೆ ಆಗಿದ್ದು, ಇದನ್ನು ಸರಿಪಡಿಸಲು ಕಾರಣವೇನು;

ಆ) ರಾಜ್ಯದಲ್ಲಿ ನೆರೆ ಹಾವಳಿಯಿಂದ ಹಾಳಾದ ಲೋಕೋಪಯೋಗಿ ರಸ್ತೆಗಳ ಸುಧಾರಣೆಗೆ ಖರ್ಚಾದ ಹಣವೆಷ್ಟು; (ಜಿಲ್ಲಾವಾರು ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):-

ಅ) ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ರಸ್ತೆಗಳಲ್ಲಿ ನೆರೆ ಮತ್ತು ಪ್ರಾಕೃತಿಕ ವಿಕೋಪದಿಂದ ಹಾಳಾದ ಭಾಗಗಳನ್ನು ವಾರ್ಷಿಕ ನಿರ್ವಹಣೆಯ ಅನುದಾನವನ್ನು ಉಪಯೋಗಿಸಿ ರಸ್ತೆಯನ್ನು ಆದಷ್ಟು ದುರಸ್ತಿಗೊಳಿಸಿ ವಾಹನ ಸಂಚಾರಕ್ಕೆ ಯೋಗ್ಯವಿರುವಂತೆ ಮಾಡಲಾಗಿದೆ.

ಆ) ಅನುಬಂಧ-1ರಲ್ಲಿ ನೀಡಿದೆ.